ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ: 1234, 5ನೇ ಮಹಡಿ, ಕೆ.ಎಸ್.ಎಸ್.ಐ.ಡಿ.ಸಿ, ಐಟಿ ಪಾರ್ಕ್, ಸೌತ್ ಬ್ಲಾಕ್
ರಾಜಾಜಿನಗರ, ಇಂಡಸ್ಟ್ರೀಯಲ್ ಎಸ್ಟೇಟ್, ಬೆಂಗಳೂರು-560010
ದೂ. 080-22372738 e-mail: karnregs@gmail.com

ಸಂಖ್ಯೆ: ಆರ್.ಡಿ.ಜಿ.ಎಸ್-ಇ.ಜಿ.ಎಸ್83/2021(476291) ದಿನಾಂಕ: 07-04-2022

**ಇವರಿಗೆ**
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

**ಮಾನ್ಯರೇ,**

**ವಿಷಯ:** ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ "ದುಡಿಯೋಣ ಬಾ" ಅಭಿಯಾನದ ಅವಧಿಯಲ್ಲಿ **"ಜಲಶಕ್ತಿ ಅಭಿಯಾನ-2022: Catch the Rain"** ಜಲಸಂರಕ್ಷಣೆ ಕಾಮಗಾರಿಗಳು ಫಲಪ್ರದವಾಗಿ ಅನುಷ್ಠಾನಗೊಳಿಸುವ ಕುರಿತು.

**ಉಲ್ಲೇಖ:**
1. ಕೇಂದ್ರ ಸರ್ಕಾರದ ಜಂಟಿ ಸುತ್ತೋಲೆ ಪತ್ರ ಸಂಖ್ಯೆ: D.O No: M-93012/1/2021-NWM/936-971, ದಿನಾಂಕ: 15-03-2022.
2. ಮಾನ್ಯ ಸಂಪುಟ ಕಾರ್ಯದರ್ಶಿಗಳು ದಿನಾಂಕ: 25-03-2022ರಂದು ವಿಡಿಯೋ ಸಂವಾದದಲ್ಲಿ ತಿಳಿಸಿರುವ ರೀತ್ಯಾ.
3. ಗೌರವಾನ್ವಿತ ರಾಷ್ಟ್ರಪತಿಗಳ ಸಂದೇಶ ರೀತ್ಯಾ ದಿನಾಂಕ: 29-03-2022.
4. ಅ.ಸ.ಪತ್ರ ಸಂಖ್ಯೆ: ಯುಸಕ್ರೀ 15 ಎನ್ ಎಸ್ ಎಸ್ 2022 ದಿನಾಂಕ: 23-03-2022.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರವು ದಿನಾಂಕ: 29-03-2022 ರಿಂದ ದಿನಾಂಕ: 30-11-2022ರವರೆಗೆ "ಜಲಶಕ್ತಿ ಅಭಿಯಾನ-2022: Catch the Rain" where it falls, when it falls ಪರಿಕಲ್ಪನೆಯಂತೆ **1. ಜಲಸಂರಕ್ಷಣೆ ಮತ್ತು ಮಳೆ ನೀರು ಕೊಯ್ಲು 2. ಸಾಂಪ್ರದಾಯಿಕ ಮತ್ತು ಇತರೆ ಜಲಮೂಲಗಳನ್ನು ಪುನಶ್ಚೇತನಗೊಳಿಸುವುದು 3. ನೀರಿನ ಪುನರ್ ಬಳಕೆ ಮತ್ತು ರೀಚಾರ್ಜ್ ಸಂರಚನೆ 4. ಜಲಾನಯನ ಅಭಿವೃದ್ಧಿ-ದಿಬ್ಬದಿಂದ ಕಣಿವೆ (Ridge to Valley) 5. ಇನ್‌ಟೆನ್ಸಿವ್ ಅರಣ್ಯೀಕರಣ,** ಈ ಐದು ತತ್ವಗಳ ಆಧಾರದ ಮೇಲೆ ಕಾಮಗಾರಿಗಳು ಕೈಗೆತ್ತಿಕೊಂಡು ದುಡಿಯೋಣ ಬಾ ಅಭಿಯಾನದಲ್ಲಿ ಮಾನವ ಶಕ್ತಿಯಿಂದ ಸೃಷ್ಟಿಯಾಗುವ ಮಾನವ ದಿನಗಳು ಜಲಶಕ್ತಿಯಾಗಿ ಪರಿವರ್ತಿಸಬೇಕಾಗಿದೆ. ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಜಲಸಂರಕ್ಷಣೆ ಕಾಮಗಾರಿಗಳಾದ ಸಮಗ್ರ ಕೆರೆ ಅಭಿವೃದ್ಧಿ, ಮಳೆ ನೀರು ಕೊಯ್ಲು, ಅಂತರ್ಜಲ ಹೆಚ್ಚಳ ಮಾಡುವ, ಮಣ್ಣಿನ ತೇವಾಂಶ ಹೆಚ್ಚಿಸುವ, ಅರಣ್ಯೀಕರಣ ಒಳಗೊಂಡಂತೆ ಈ ಕೆಳಕಂಡ ಕಾಮಗಾರಿಗಳನ್ನು ಈಗಾಗಲೇ ತರಬೇತಿ ನೀಡಿರುವ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು **(ಕ್ಲಾರ್ಟ್ ಆ್ಯಪ್)** ವೈಜ್ಞಾನಿಕವಾಗಿ ಅನುಷ್ಠಾನಗೊಳಿಸುವುದು ಪ್ರಾಮುಖ್ಯವಾಗಿರುತ್ತದೆ. "ದಿಬ್ಬದಿಂದ ಕಣಿವೆ ಯೋಜನೆಯಡಿ ಗ್ರಾಮಗಳ ಹಾಗೂ ಗ್ರಾಮ ಪಂಚಾಯತಿಗಳ ಸಮಗ್ರ ಕಾಮಗಾರಿಗಳು ಅನುಷ್ಠಾನಗೊಳಿಸಲು ಉಲ್ಲೇಖ-1 ಮತ್ತು 2ರ ಪತ್ರದಲ್ಲಿ ಮಾರ್ಗಸೂಚಿಗಳನ್ನು ನೀಡಲಾಗಿರುತ್ತದೆ. ದಿನಾಂಕ: 29-03-2022ರಂದು ಅಭಿಯಾನಕ್ಕೆ ಚಾಲನೆ ನೀಡಿದ ಗೌರವಾನ್ವಿತ ರಾಷ್ಟ್ರಪತಿಗಳು ಮುಂಗಾರು ಪೂರ್ವ ಅವಧಿಯಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಅನುಷ್ಠಾನಿಸುವ ಕಾಮಗಾರಿಗಳು ಮಳೆ ನೀರು ಸಂರಕ್ಷಣೆಗೆ ಹೂಡಿಕೆ ಮಾಡುವುದು ಹಾಗೂ ಈ ವರ್ಷದ ಅಭಿಯಾನದ ಅವಧಿಯಲ್ಲಿ ಪ್ರತಿ ಗ್ರಾಮದಲ್ಲಿ ಮಳೆ ನೀರು ಹಿಡಿದಿಟ್ಟುಕೊಳ್ಳುವ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಕರೆ ನೀಡಿರುತ್ತಾರೆ.

1. ಗೌರವಾನ್ವಿತ ರಾಷ್ಟ್ರಪತಿಗಳ ಆಶಯದಂತೆ ಹಾಗೂ ಸನ್ಮಾನ್ಯ ಸಚಿವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕರ್ನಾಟಕರವರು ಸೂಚಿಸಿರುವಂತೆ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ದಿನಾಂಕ: 01-04-2022 ರಿಂದ ಈ ವರ್ಷದಲ್ಲಿ ಅತೀ ಹೆಚ್ಚು "ಮಳೆ ನೀರು ಸಂರಕ್ಷಣೆ ಮತ್ತು ಅಂತರ್ಜಲ ಹೆಚ್ಚಿಸುವ" ಕಾಮಗಾರಿಗಳನ್ನು ಅಭಿಯಾನದಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿದ್ದು, ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ನೀಡಲಾಗಿದೆ.

i. **ಸಮಗ್ರ ಕೆರೆ ಅಭಿವೃದ್ಧಿ:** ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಕೆರೆಗಳ ಬರಿ ಹೂಳೆತ್ತುವ ಕಾಮಗಾರಿಗಳು ಮತ್ತು ಕಾಮಗಾರಿಗಳು ವಿಂಗಡಣೆ/ತುಂಡು ಮಾಡಿ ಅನುಷ್ಠಾನಗೊಳಿಸುವುದು ಪ್ರತಿಬಂಧಿಸಿದೆ. ಕೆರೆಗಳ ಒತ್ತುವರಿಯನ್ನು ತೆರವುಗೊಳಿಸುವುದು, ಆಸ್ತಿ ದಾಖಲೆಗಳನ್ನು ಖಾತರಿ ಪಡಿಸುವುದು. ಕೆರೆಗಳನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಈ ಕೆಳಕಂಡ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳುವುದು.

- **ಕೆರೆಗೆ ನೀರು ಹರಿದು ಬರುವ ಕಾಲುವೆಗಳ ಪುನಶ್ಚೇತನ:-** ಗೂಗಲ್ ಅರ್ಥ್ ಅಥವಾ ದಿಶಾಂಕ್ ಮೊಬೈಲ್ ಅಪ್ಲಿಕೇಶನ್ ಬಳಸಿಕೊಂಡು ಕೆರೆಗೆ ನೀರು ಹರಿದು ಬರುವ ಕಾಲುವೆ/ಹಳ್ಳಗಳನ್ನು ಗುರುತಿಸಿ ಅವುಗಳನ್ನು ದುರಸ್ತಿಗೊಳಿಸುವುದು ಮತ್ತು ಹೂಳು ತೆಗೆಯುವುದು. ಈ ಕಾಮಗಾರಿಯು ಕಡಿಮೆ ಶ್ರಮದ ಕಾಮಗಾರಿ ಆಗಿರುವುದರಿಂದ ಇದರಲ್ಲಿ ಮಹಿಳೆಯರಿಗೆ ಮತ್ತು ಹಿರಿಯ ನಾಗರಿಕರಿಗೆ ಕೆಲಸ ನೀಡಬಹುದಾಗಿದೆ. ಈ ಕಾಲುವೆ/ಹಳ್ಳಗಳ ನೀರು ಕೆರೆಗೆ ಪ್ರವೇಶಿಸುವ ಸ್ಥಳದಲ್ಲಿ Silt Trap ನಿರ್ಮಿಸುವುದು.
- **ಹೂಳು ತೆಗೆಯುವುದು:-** ಕೆರೆಯಲ್ಲಿನ ಹೂಳನ್ನು ವೈಜ್ಞಾನಿಕವಾಗಿ ಅಂದಾಜು ಮಾಡಿ ಹೂಳು ತೆಗೆಯಲು ಕ್ರಮವಹಿಸುವುದು. ಸದರಿ ಹೂಳನ್ನು ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದ ಸಣ್ಣ ರೈತರ ಅಗತ್ಯವಿರುವ ಹೊಲ ಗದ್ದೆಗಳಿಗೆ ಸಾಗಿಸಲು ನಿಯಮಾನುಸಾರ ನೆರವಾಗುವುದು.
- **ಕೆರೆ ಏರಿ ದುರಸ್ತಿ:-** ಕೆರೆಯಲ್ಲಿ ಬೆಳೆದಿರುವ ಜಂಗಲ್ ತೆಗೆಯುವುದು ಹಾಗೂ ಏರಿಯನ್ನು ದುರಸ್ತಿಗೊಳಿಸುವುದು ಮತ್ತು ಏರಿಯನ್ನು ಸ್ಥಿರೀಕರಣಗೊಳಿಸಲು ಇಳಿಜಾರುಗಳಲ್ಲಿ ಗಿಡಗಳನ್ನು ನೆಡುವುದು. ಕೆರೆಯ ನೀರು ಸಂಗ್ರಹವಾಗುವ ಭಾಗಕ್ಕೆ ರಿವಿಟ್‌ಮೆಂಟ್ ಮಾಡುವುದು. ಒಟ್ಟಾರೆ ಸಂಗ್ರಹಿಸಿದ ನೀರಿನ ತಡೆಗಟ್ಟಲು ಕ್ರಮ ಕೈಗೊಳ್ಳುವುದು.
- ಕೆರೆ ಕೋಡಿ ಮತ್ತು ರೈತರ ಜಮೀನುಗಳಿಗೆ ನೀರು ಹರಿದು ಹೋಗುವ ಕಾಲುವೆಗಳನ್ನು ದುರಸ್ತಿಗೊಳಿಸುವುದು.
- ಕೆರೆ ಅಂಚಿನ ಖಾಲಿ ಪ್ರದೇಶಗಳಲ್ಲಿ ಸಸಿಗಳನ್ನು ಬೆಳೆಸುವುದು ಮತ್ತು ಅಗತ್ಯವಿದ್ದಲ್ಲಿ ನಿಯಮಾನುಸಾರ ಕೆರೆ ಸೌಂದರ್ಯೀಕರಣ ಹಾಗೂ ವಾಕಿಂಗ್ ಟ್ರಾಕ್ ನಿರ್ಮಿಸುವುದು.

ii. **ನೀರಿನ ಸಂರಕ್ಷಣೆ ಮತ್ತು ಮಳೆ ನೀರು ಕೊಯ್ಲು:** ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಅಥವಾ ಇತರೆ ಸರ್ಕಾರಿ ಯೋಜನೆಯಡಿ ನಿರ್ಮಿಸಲಾಗಿರುವ ಕಟ್ಟಡಗಳ ಛಾವಣಿಯ ಮೇಲ್ಭಾಗದಲ್ಲಿ ಮಳೆ ನೀರು ಕೊಯ್ಲುಗಳು, ಅಸ್ತಿತ್ವದಲ್ಲಿರುವ ನೀರಿನ ಕೊಯ್ಲು ಸಂರಚನೆಗಳ ನಿರ್ವಹಣೆ ಕೈಗೊಳ್ಳುವುದು, ಸಾಂಪ್ರದಾಯಿಕ ನೀರು ಕೊಯ್ಲು ನವೀಕರಣ ಮಾಡುವುದು, ಕೆರೆ ಒತ್ತುವರಿ ಹಾಗೂ ಅವುಗಳ Catchment ಚನಲ್ ಮಾಡುವುದು, ಜಲಾನಯನ ಅಭಿವೃದ್ಧಿ ಮಾಡುವುದು, ಸಣ್ಣ ನದಿಗಳು ಮತ್ತು ನದಿಗಳ ಪುನರ್‌ಜ್ಜೀವನ್ ಮಾಡುವುದು, ಜೌಗು ಪ್ರದೇಶಗಳ ಪುನರುಜ್ಜೀವನ ಮತ್ತು ಪ್ರವಾಹ ದಡಗಳ ಸಂರಕ್ಷಣೆ ಮಾಡುವುದು, ನೀರಿನ ಜಲಾನಯನ ಪ್ರದೇಶಗಳಲ್ಲಿ ಸ್ಪ್ರಿಂಗ್ ಶೆಡ್ ಅಭಿವೃದ್ಧಿಪಡಿಸುವುದು.

iii. **ಕಲ್ಯಾಣಿ ಪುನಶ್ಚೇತನ:** ಪ್ರತಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಇರುವ ಕಲ್ಯಾಣಿಗಳನ್ನು ಗುರುತಿಸಿ ಅವುಗಳನ್ನು ಪುನಶ್ಚೇತನಗೊಳಿಸುವುದು.

iv. **ನಾಲಾ ಪುನಶ್ಚೇತನ:** ನಾಲಾಗಳ ಅಗಲೀಕರಣ, ಹೂಳು ತೆಗೆಯುವುದು, ನಾಲಾ ಬದುಗಳ ಸ್ಥಿರೀಕರಣ ಮತ್ತು ನಾಲಾ ಬದುಗಳ ಮೇಲೆ ಸಸಿಗಳನ್ನು ನೆಡುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು. ನಾಲಾಗಳಲ್ಲಿ ಪ್ರತಿ 30 ರಿಂದ 50 ಮೀಟರ್ ಅಂತರದಲ್ಲಿ Boulder Check, ರೀಚಾರ್ಜ್ ಪಿಟ್‌ಗಳನ್ನು ನಿರ್ಮಾಣ ಮಾಡುವುದು.

v. **ಗೋಕಟ್ಟೆಗಳ ನಿರ್ಮಾಣ:** ಗ್ರಾಮ ಪಂಚಾಯತಿ ವ್ಯಾಪ್ತಿಯ ಸಾರ್ವಜನಿಕ ಸ್ಥಳಗಳಲ್ಲಿ ಗೋಕಟ್ಟೆಗಳನ್ನು ನಿರ್ಮಿಸುವುದು ಹಾಗೂ ಪುನಶ್ಚೇತನಗೊಳಿಸುವುದು.

vi. **ಹೊಸ ಕೆರೆ ನಿರ್ಮಾಣ:** ಗ್ರಾಮ ಪಂಚಾಯತಿ ವ್ಯಾಪ್ತಿಯ ಸರ್ಕಾರಿ ಜಾಗದಲ್ಲಿ ಮತ್ತು ಅರಣ್ಯ ಪ್ರದೇಶಗಳಲ್ಲಿ ವೈಜ್ಞಾನಿಕವಾಗಿ ಕೆರೆಗಳನ್ನು ನಿರ್ಮಿಸುವುದು. ನಿರ್ಮಿಸಿದ ಕೆರೆಗೆ ಗ್ರಾಮದ ಐತಿಹ್ಯದ ಪದದ ಜೊತೆಯಲ್ಲಿ **"ನರೇಗಾ/ಉದ್ಯೋಗ ಖಾತ್ರಿ ಅಮೃತ್ ಸರೋವರ/ಕೆರೆ"**ವೆಂದು ನಾಮಕರಣ ಮಾಡಿ ಸಂರಕ್ಷಿಸಿ ಪ್ರಚುರಪಡಿಸುವುದು.

vii. **ಸೋಕ್ ಪಿಟ್ ನಿರ್ಮಾಣ:** ಪ್ರಸ್ತುತ ಪ್ರಗತಿಯಲ್ಲಿರುವ ಸೋಕ್ ಪಿಟ್ ಕಾಮಗಾರಿಗಳನ್ನು ಪೂರ್ಣಗೊಳಿಸಿ ಹೊಸ ಸೋಕ್ ಪಿಟ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು. ಗ್ರಾಮ ಅಥವಾ

ಗ್ರಾಮ ಪಂಚಾಯತಿ ಸಂಪೂರ್ಣ ಕೊಳಚೆ ಮುಕ್ತ ಅಥವಾ ಬಚ್ಚಲು ಗುಂಡಿ ಯುಕ್ತ ಗ್ರಾಮಗಳಾಗಿ ಘೋಷಿಸುವುದು. ಜೊತೆಯಲ್ಲಿ ಬೂದು ನೀರು ನಿರ್ವಹಣೆ ಕಾಮಗಾರಿಗಳು ಮಾಡುವುದು.

viii. **ಮಲ್ಟಿ ಆರ್ಚ್/ಗೇಬಿಯಾನ್ ಚೆಕ್ ಡ್ಯಾಂ:** ಪ್ರತಿ ಗ್ರಾಮ ಪಂಚಾಯತಿಗೆ ಕನಿಷ್ಟ ಒಂದು ಮಲ್ಟಿ ಆರ್ಚ್/ಗೇಬಿಯಾನ್ ಚೆಕ್ ಡ್ಯಾಂ ನಿರ್ಮಾಣ ಮಾಡುವುದು. ಮಲ್ಟಿ ಆರ್ಚ್ ಚೆಕ್ ಡ್ಯಾಂ ನಿರ್ಮಾಣ ಮಾಡಲು ಈ ಕಛೇರಿಯ ಪತ್ರ ಸಂಖ್ಯೆ: ಗ್ರಾಅಪ 303 ಉಖಾಯೋ 2018, ದಿನಾಂಕ:26-09-2019ರ ಪತ್ರದಲ್ಲಿ ನೀಡಿರುವ ಮಾರ್ಗಸೂಚಿಗಳನ್ನು ಅನುಸರಿಸುವುದು. (ಪ್ರತಿ ಲಗತ್ತಿಸಿದೆ)

ix. **ಬೋರ್‌ವೆಲ್ ರಿಚಾರ್ಜ್:** ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ಬಳಸುವ ಬೋರ್‌ವೆಲ್‌ಗಳಿಗೆ ಆದ್ಯತೆಯ ಮೇರೆಗೆ ವೈಜ್ಞಾನಿಕವಾಗಿ ರಿಚಾರ್ಜ್ ಪಿಟ್ ನಿರ್ಮಾಣ ಮಾಡುವುದು. ವೈಯಕ್ತಿಕ/ಸಮುದಾಯದ ಬತ್ತಿ ಹೋಗಿರುವ ಕೊಳವೆ ಬಾವಿಗಳಿಗೆ ರೀಚಾರ್ಜ್ ಪಿಟ್ ನಿರ್ಮಿಸಿ ಪುನಶ್ಚೇತನಗೊಳಿಸುವುದು.

x. **ಅರಣ್ಯೀಕರಣ ಕಾಮಗಾರಿಗಳು:** ರಸ್ತೆ ಬದಿ ನೆಡುತೋಪು, ವಿಶೇಷವಾಗಿ ಸರ್ಕಾರಿ ಪಾಳು ಜಮೀನುಗಳಲ್ಲಿ ಬ್ಲಾಕ್ ಪ್ಲಾಂಟೇಶನ್ (ಮಿನಿ ಅರಣ್ಯ), ರೈತರ ಜಮೀನುಗಳಲ್ಲಿ ಸಸಿ ನೆಡುವುದು ಮತ್ತು ಅರಣ್ಯ ಪ್ರದೇಶಗಳಲ್ಲಿ ಕಂದಕಗಳ ನಿರ್ಮಾಣ.

xi. **ಬದು ನಿರ್ಮಾಣ ಅಭಿಯಾನ:** ರೈತರ ಜಮೀನುಗಳಲ್ಲಿ ಇಳಿಜಾರು ಅಥವಾ ನೀರು ಹರಿದು ಬರುವ ದಿಕ್ಕಿಗೆ ವಿರುದ್ಧವಾಗಿ (ವಾಟರ್ ಶೆಡ್) ಸೂಕ್ತ ಸ್ಥಳಗಳಲ್ಲಿ ಅಳತೆ ಮತ್ತು ಅಗತ್ಯಕ್ಕೆ ಅನುಗುಣವಾಗಿ ಮಾರ್ಗಸೂಚಿಗಳನ್ವಯ ಬದು, ಕೃಷಿಹೊಂಡ ಮತ್ತು ತೆರೆದ ಬಾವಿಗಳನ್ನು ನಿರ್ಮಿಸುವುದು.

xii. **ಚೆಕ್ ಡ್ಯಾಂಗಳ ಹೂಳು ತೆಗೆಯುವುದು:** ಈಗಾಗಲೇ ಯೋಜನೆಯಡಿ ನಿರ್ಮಿರಿಸಿರುವ ಚೆಕ್ ಡ್ಯಾಂಗಳ ಹಿಂಭಾಗದಲ್ಲಿನ ಹೂಳು ತೆಗೆಯುವುದು ಮತ್ತು ನಾಲಾಗಳನ್ನು ದುರಸ್ತಿಗೊಳಿಸಿ ಸುಭದ್ರ ಮಾಡಿ, ಸಮರ್ಥವಾಗಿ ನೀರು ನಿಲ್ಲುವಂತೆ ಮಾಡುವುದು.

xiii. **ಜಲ ಸಂರಕ್ಷಣೆ ಕಾಮಗಾರಿಗಳ ದುರಸ್ತಿ:** ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ನಿರ್ಮಿಸಲಾಗಿರುವ 03 ಅಥವಾ ಅದಕ್ಕಿಂತ ಹಿಂದಿನ ವರ್ಷಗಳ ಜಲ ಸಂರಕ್ಷಣೆ ಕಾಮಗಾರಿಗಳನ್ನು ದುರಸ್ತಿಗೊಳಿಸುವುದು. ಕಳೆದ 03 ವರ್ಷಗಳಲ್ಲಿ ನಿರ್ಮಿಸಿರುವ ಜಲ ಸಂರಕ್ಷಣೆ ಕಾಮಗಾರಿಗಳು ಪ್ರಕೃತಿ ವಿಕೋಪದಿಂದ ಹಾನಿಯಾಗಿದ್ದಲ್ಲಿ ಅವುಗಳನ್ನು ದುರಸ್ತಿಗೊಳಿಸಲು ಕ್ರಮವಹಿಸುವುದು.

2. ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರತಿ ಗ್ರಾಮ ಪಂಚಾಯತಿ ಮತ್ತು ಅನುಷ್ಠಾನ ಇಲಾಖೆಗಳಿಗೆ ಮೇಲ್ಕಂಡ ಕಾಮಗಾರಿಗಳ ಗುರಿಗಳನ್ನು ನಿಗದಿಪಡಿಸುವುದು. ಪ್ರತಿ 15 ದಿವಸಕ್ಕೆ "**ಜಲಶಕ್ತಿ ಸಭೆ**"ಯನ್ನು ಏರ್ಪಡಿಸಿ ಪ್ರಗತಿಗೆ ವೇಗ ನೀಡುವುದು. ಜಲಶಕ್ತಿ ಬಗ್ಗೆ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ ಚರ್ಚೆ-ಸಂವಾದ, ಭಾಷಣ, ಚಿತ್ರಕಲೆ ಸ್ಪರ್ದೆಗಳು ಏರ್ಪಡಿಸುವುದು, **"ಜಲಶಪಥ ಮಾಡಿಸಿ"** ಕಾಮಗಾರಿಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು. **ಕೇಂದ್ರ ಸರ್ಕಾರವು ಪ್ರತಿ ವರ್ಷ ಮಾರ್ಚ್ 22 ರಂದು ವಿಶ್ವಜಲ ದಿನ ಆಚರಿಸಿ ಜಲಶಕ್ತಿ ಅಭಿಯಾನದಡಿ ಉನ್ನತ ಪ್ರಗತಿ ಹಾಗೂ ಅತೀ ಹೆಚ್ಚು ಜಲಸಂರಕ್ಷಣೆ ಕಾಮಗಾರಿಗಳನ್ನು ಮಾಡಿ ಸಾಧನೆಗೈದ ಗ್ರಾ.ಪಂ/ತಾ.ಪಂ/ಜಿ.ಪಂ ಮತ್ತು ಸಂಸ್ಥೆಗಳಿಗೆ ಪ್ರಶಸ್ತಿಗಳನ್ನು ನೀಡಿ ಅಭಿನಂದಿಸುತ್ತಿರುವುದು ಗಮನಿಸಬಹುದಾಗಿದೆ.** ಈ ಹಿನ್ನಲೆಯಲ್ಲಿ ತಕ್ಷಣವೇ ಯೋಜನಾ ಬದ್ಧವಾಗಿ ಹಾಗೂ ನಿರೀಕ್ಷಿತ ಫಲಶೃತಿಗಳೊಂದಿಗೆ ಕಾರ್ಯನಿರ್ವಹಿಸುವುದು.

3. ಜಿಲ್ಲಾ ಮಟ್ಟದಲ್ಲಿ ದುಡಿಯೋಣ ಬಾ ಅಭಿಯಾನದ ಅಡಿಯಲ್ಲಿ ಜಲ ಶಕ್ತಿ ಅಭಿಯಾನವನ್ನು ಮಾನ್ಯ ಜಿಲ್ಲಾ ಉಸ್ತುವಾರಿ ಮಂತ್ರಿಗಳು/ಮಾನ್ಯ ಶಾಸಕರು, ಜನಪ್ರತಿನಿಧಿಗಳ ನೇತೃತ್ವದಲ್ಲಿ ಜಲ ಸಂರಕ್ಷಣೆ/ಪುನಶ್ಚೇತನ ಕಾಮಗಾರಿ ಪ್ರಾರಂಭಿಸುವುದು ಅಥವಾ ಕಾಮಗಾರಿಗಳು ಪೂರ್ಣಗೊಳಿಸಿದ ನಂತರ ಚಾಲನೆ ನೀಡುವುದು.

4. ಜಲಶಕ್ತಿ ಅಭಿಯಾನ-22: "Catch the Rain" ಅಭಿಯಾನವನ್ನು ಯಶಸ್ವಿಗೊಳಿಸಲು ಸಂಬಂಧಪಟ್ಟ ಇಲಾಖೆಗಳೊಂದಿಗೆ ಒಗ್ಗೂಡಿಸುವಿಕೆಯಲ್ಲಿ ಸಮನ್ವಯತೆಯನ್ನು ಸಾಧಿಸಿ ತಾಂತ್ರಿಕ, ಆರ್ಥಿಕ ನೆರವು ಪಡೆದು ಯಶಸ್ವಿಗೊಳಿಸುವುದು.

5. ಕೇಂದ್ರ ಸರ್ಕಾರ ಹಾಗೂ ಅಪರ ಮುಖ್ಯ ಕಾರ್ಯದರ್ಶಿಗಳು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆರವರು ಅಭಿಯಾನವನ್ನು ಸಕ್ರಿಯವಾಗಿ ಮತ್ತು ಜನಾಂದೋಲನವಾಗಿ ಮಾರ್ಪಡಿಸಲು ರಾಜ್ಯದ ರಾಷ್ಟ್ರೀಯ ಸೇವಾ ಯೋಜನೆ ಮತ್ತು ನೇಹರು ಯುವ ಕೇಂದ್ರದ ಸ್ವಯಂ ಸೇವಕರು, ಸಂಘ ಸಂಸ್ಥೆಗಳು, ಸ್ತ್ರೀ ಶಕ್ತಿ ಸಂಘಟನೆಗಳು, ಸಂಸ್ಥೆಗಳೊಂದಿಗೆ ಕೈಜೋಡಿಸಿ ಮಾನ್ಯ ಮುಖ್ಯ ಮಂತ್ರಿಗಳು ಆಶಯದಂತೆ ಅಜಾಧಿ ಕಾ ಅಮೃತ ಮಹೋತ್ಸವ್ ಸವಿನೆನಪಿಗಾಗಿ ಘೋಷಿಸಿದ 750 ಅಮೃತ ಗ್ರಾಮ

ಪಂಚಾಯತಿಗಳಲ್ಲಿ ಪ್ರಥಮ ಆದ್ಯತೆ ಮೇರೆಗೆ NSS ಮತ್ತು NYK ಸ್ವಯಂ ಸೇವಕರುಗಳಿಗೆ ತರಬೇತಿ ನೀಡಿ ಅಭಿಯಾನ ಯಶಸ್ವಿಗೊಳ್ಳಲು ಸಹಕಾರ ಪಡೆಯಲು ಉಲ್ಲೇಖ-4 ರಲ್ಲಿ ತಿಳಿಸಿದ್ದಾರೆ.

6. ಜಿಲ್ಲೆಗಳಿಗೆ ಸೂಚಿಸಿರುವ ಜಲಶಕ್ತಿ ಅಭಿಯಾನದ ಲಾಗಿನ್‌ಗಳಲ್ಲಿ ಸದರಿ ಕಾಮಗಾರಿಗಳು ಆರೋಹಿಸುವುದು ಮತ್ತು ಸಂಬಂಧಪಟ್ಟ ತಾಂತ್ರಿಕತೆ ಬಗ್ಗೆ ಸಂಪನ್ಮೂಲ ಕೇಂದ್ರಗಳಲ್ಲಿ NRDMS ರವರ ಸೇವೆಯನ್ನು ಬಳಸಿಕೊಳ್ಳುವುದು.

7. ಈ ಅಭಿಯಾನದ ಪ್ರಗತಿಯ ವರದಿಯನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಪ್ರತಿ 15 ದಿನಗಳಿಗೊಮ್ಮೆ ಈ ಕಛೇರಿಗೆ ಸಲ್ಲಿಸುವುದು.

ತಮ್ಮ ವಿಶ್ವಾಸಿ

11/04/22

ಆಯುಕ್ತರು, ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಪ್ರತಿಯನ್ನು ಈ ಕೆಳಕಂಡವರ ಮಾಹಿತಿಗಾಗಿ ಸಲ್ಲಿಸಿದೆ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿ ಕಟ್ಟಡ
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿ ಕಟ್ಟಡ.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು ಬಹುಮಹಡಿ ಕಟ್ಟಡ
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು ಬಹುಮಹಡಿ ಕಟ್ಟಡ
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ.
8. ಪ್ರಾದೇಶಿಕ ಆಯುಕ್ತರು ಬೆಂಗಳೂರು, ಮೈಸೂರು, ಕಲಬುರಗಿ ಮತ್ತು ಬೆಳಗಾವಿ
9. ಎಲ್ಲಾ ಅನುಷ್ಠಾನ ಇಲಾಖೆಗಳ ಮುಖ್ಯಸ್ಥರುಗಳಿಗೆ:
   i. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
   ii. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು,
   iii. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.
   iv. ಆಯುಕ್ತರು, ಪಶುಸಂಗೋಪನ ಇಲಾಖೆ, ವಿ.ವಿ.ಟವರ್, ಬೆಂಗಳೂರು
   v. ಆಯುಕ್ತರು ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ, ಗ್ರಾಮೀಣ ನೀರು ಸರಬರಾಜು ವಿಭಾಗ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕಾವೇರಿ ಭವನ, ಬೆಂಗಳೂರು
   vi. ರೇಷ್ಮೆ ಅಭಿವೃದ್ಧಿ ಆಯುಕ್ತರು, ರೇಷ್ಮೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
   vii. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್ ಬಾಗ್ ರಸ್ತೆ, ಬೆಂಗಳೂರು.
   viii. ನಿರ್ದೇಶಕರು, ಮೀನುಗಾರಿಕೆ ಇಲಾಖೆ, ವಿ.ವಿ.ಟವರ್, ಬೆಂಗಳೂರು.
   ix. ಮುಖ್ಯ ಅಭಿಯಂತರರು (ಸಣ್ಣ ನೀರಾವರಿ) ಉತ್ತರವಲಯ ಬಿಜಾಪುರ/ದಕ್ಷಿಣವಲಯ, ಕೆ.ಆರ್.ವೃತ್ತ, ಬೆಂಗಳೂರು.
   x. ಮುಖ್ಯ ಅಭಿಯಂತರರು ಪಂಚಾಯತ್ ರಾಜ್ ಇಂಜನಿಯರಿಂಗ್ ಇಲಾಖೆ, ಬೆಂಗಳೂರು.
   xi. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
10. ಓಂಬುಡ್ಸ್‌ಮನ್‌ಗಳ ಮೇಲ್ಮನವಿ ಪ್ರಾಧಿಕಾರ, ಬಹುಮಹಡಿ ಕಟ್ಟಡ
11. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು
12. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್, ಗ್ರಾಮೀಣಾಭಿವೃದ್ಧಿಯ ರಾಜ್ಯ ಸಂಸ್ಥೆ, ಲಲಿತಮಹಲ್ ರಸ್ತೆ, ಮೈಸೂರು

13. ನಿರ್ದೇಶಕರು, ಯೋಜನಾ ಉಸ್ತುವಾರಿ ಮತ್ತು ಮಾಹಿತಿ ವಿಭಾಗ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
14. ಮುಖ್ಯ ಆರ್ಥಿಕ ಸಲಹೆಗಾರು/ಜಂಟಿ ನಿರ್ದೇಶಕರು (ತೋಟಗಾರಿಕೆ/ತಾಂತ್ರಿಕ/ಆಡಳಿತ) ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ,
15. ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದ ಎಲ್ಲಾ ಸಹಾಯಕ ನಿರ್ದೇಶಕರುಗಳಿಗೆ
16. ರಾಜ್ಯದ ಎಲ್ಲಾ ಜಿಲ್ಲೆಗಳ ಒಂಬುಡ್ಸ್‌ಮನ್‌ಗಳಿಗೆ
17. ರಾಜ್ಯದ ಎಲ್ಲಾ ರಾಜ್ಯ/ಜಿಲ್ಲಾ ಗುಣ ನಿಯಂತ್ರಣ ಮಾನಿಟರ್‌ಗಳಿಗೆ.
18. ಸಂಪಾದಕರು ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿಗಳವರ ಮಾಹಿತಿಗಾಗಿ ಮತ್ತು ಈ ಆದೇಶದ ಸುತ್ತೋಲೆಯನ್ನು ಕರ್ನಾಟಕ ವಿಕಾಸದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿದೆ.
19. ಹೆಚ್ಚಿನ ಪ್ರತಿಗಳು

# ಜಲಶಕ್ತಿ ಅಭಿಯಾನ 2022 – JSA-CTR (ನಮೂನೆಯಲ್ಲಿ ತಿಳಿಸಿರುವ ರೀತಿ ಪ್ರತಿ 15 ದಿನಕ್ಕೊಮ್ಮೆ ಪ್ರಗತಿ ವಿವರ ಸಲ್ಲಿಸುವುದು)

| Sl.No | Districts | 1 | | | | 2 | | | | 3 | | | | 4 | | | |
|---|---|---|---|---|---|---|---|---|---|---|---|---|---|---|---|---|---|
| | | ಸಮಗ್ರ ಕೆರೆ ಅಭಿವೃದ್ಧಿ | | | | ನೀರಿನ ಸಂರಕ್ಷಣೆ ಮತ್ತು ಮಳೆ ನೀರು ಕೊಯ್ಲು | | | | ಕಲ್ಯಾಣಿ ಪುನಶ್ಚೇತನ | | | | ನಾಲಾ ಪುನಶ್ಚೇತನ | | | |
| | | Annual Target (New+ spill over) | Started from 01/04/22 Till day | Completed from 01/04/22 Till date | Ongoing till date | Annual Target (New+ spill over) | Started from 01/04/22 Till day | Completed from 01/04/22 Till date | Ongoing till date | Annual Target (New+ spill over) | Started from 01/04/22 Till day | Completed from 01/04/22 Till date | Ongoing till date | Annual Target (New+ spill over) | Started from 01/04/22 Till day | Completed from 01/04/22 Till date | Ongoing till date |
| 1 | Bagalkot | | | | | | | | | | | | | | | | |
| 2 | Bengaluru Urban | | | | | | | | | | | | | | | | |
| 3 | Bengaluru Rural | | | | | | | | | | | | | | | | |
| 4 | Belagavi | | | | | | | | | | | | | | | | |
| 5 | Ballari | | | | | | | | | | | | | | | | |
| 6 | Bidar | | | | | | | | | | | | | | | | |
| 7 | Vijayapur | | | | | | | | | | | | | | | | |
| 8 | Chamarajanagar | | | | | | | | | | | | | | | | |
| 9 | Chikballapur | | | | | | | | | | | | | | | | |
| 10 | Chikkamagaluru | | | | | | | | | | | | | | | | |
| 11 | Chitradurga | | | | | | | | | | | | | | | | |
| 12 | Dakshina Kannada | | | | | | | | | | | | | | | | |
| 13 | Davanagere | | | | | | | | | | | | | | | | |
| 14 | Dharwad | | | | | | | | | | | | | | | | |
| 15 | Gadag | | | | | | | | | | | | | | | | |
| 16 | Kalaburagi | | | | | | | | | | | | | | | | |
| 17 | Hassan | | | | | | | | | | | | | | | | |
| 18 | Haveri | | | | | | | | | | | | | | | | |
| 19 | Kodagu | | | | | | | | | | | | | | | | |
| 20 | Kolar | | | | | | | | | | | | | | | | |
| 21 | Koppal | | | | | | | | | | | | | | | | |
| 22 | Mandya | | | | | | | | | | | | | | | | |
| 23 | Mysuru | | | | | | | | | | | | | | | | |
| 24 | Raichur | | | | | | | | | | | | | | | | |
| 25 | Ramanagara | | | | | | | | | | | | | | | | |
| 26 | Shivamogga | | | | | | | | | | | | | | | | |
| 27 | Tumakuru | | | | | | | | | | | | | | | | |
| 28 | Udupi | | | | | | | | | | | | | | | | |
| 29 | Uttara Kannada | | | | | | | | | | | | | | | | |
| 30 | Yadgir | | | | | | | | | | | | | | | | |
| 31 | Vijaynagara | | | | | | | | | | | | | | | | |

| 5 | | | | 6 | | | | 7 | | | | 8 | | | | 9 | | | |
|---|---|---|---|---|---|---|---|---|---|---|---|---|---|---|---|---|---|---|---|
| ಗೋಕಟ್ಟೆಗಳ ನಿರ್ಮಾಣ | | | | ಹೊಸ ಕೆರೆ ನಿರ್ಮಾಣ | | | | ಸೋಕ್ ಪಿಟ್ ನಿರ್ಮಾಣ | | | | ಮಲ್ಟಿ ಆರ್ಚ್/ಗೇಬಿಯನ್ ಚೆಕ್ ಡ್ಯಾಂ | | | | ಬೋರವೆಲ್ ರಿಚಾ[illegible] | | | |
| Annual Target (New+ spill over) | Started from 01/04/22 Till day | Completed from 01/04/22 Till date | Ongoing till date | Annual Target (New+ spill over) | Started from 01/04/22 Till day | Completed from 01/04/22 Till date | Ongoing till date | Annual Target (New+ spill over) | Started from 01/04/22 Till day | Completed from 01/04/22 Till date | Ongoing till date | Annual Target (New+ spill over) | Started from 01/04/22 Till day | Completed from 01/04/22 Till date | Ongoing till date | Annual Target (New+ spill over) | Started from 01/04/22 Till day | Completed from 01/04/22 Till date | Ongoing till date |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |

| 10 | | | | 11 | | | | 12 | | | | 13 | | | |
|---|---|---|---|---|---|---|---|---|---|---|---|---|---|---|---|
| ಅರಣ್ಯೀಕರಣ ಕಾಮಗಾರಿಗಳು | | | | ಚೆಕ್ ಡ್ಯಾಂಗಳ ಹೂಳು ತೆಗೆಯುವುದು | | | | ಬದು ನಿರ್ಮಾಣ ಅಭಿಯಾನ | | | | ಜಲ ಸಂರಕ್ಷಣೆ ಕಾಮಗಾರಿಗಳ ದುರಸ್ತಿ | | | |
| **Annual Target (New+ spill over)** | **Started from 01/04/22 Till day** | **Complete d from 01/04/22 Till date** | **Ongoing till date** | **Annual Target (New+ spill over)** | **Started from 01/04/22 Till day** | **Complete d from 01/04/22 Till date** | **Ongoing till date** | **Annual Target (New+ spill over)** | **Started from 01/04/22 Till day** | **Complete d from 01/04/22 Till date** | **Ongoing till date** | **Annual Target (New+ spill over)** | **Started from 01/04/22 Till day** | **Complete d from 01/04/22 Till date** | **Ongoing till date** |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |